ಹಾಡುವ ಅಪರೂಪದ ಕಲಾವಿದರು. ಪಲ್ಲವಿ ಚಂದ್ರಪ್ಪ ಅವರ ಶಿಷ್ಯರಾದ ನಂದಕುಮಾರ್ ತಾಳವಧಾನದಲ್ಲಿ ವಿಶೇಷ ಪರಿಣತಿ ಪಡೆದವರು. ವಿದುಷಿ ಪದ್ಮ ಗುರುದತ್, ವಿದ್ವಾನ್ ವರದರಾಜ ಸಿ ಹಾಗೂ ವಿದ್ವಾನ್ ಹೇಮಂತಕುಮಾರ್ ವಿ. ಅವಧಾನ ಪಲ್ಲವಿ ಹಾಡುವ, ಪ್ರಾತ್ಯಕ್ಷಿಕೆ ನಡೆಸಿಕೊಡುವ ಹಿರಿಯ ಕಲಾವಿದರು.

'ಅವಧಾನವನ್ನು ಶ್ರುತಿಯಲ್ಲಿಯೂ ಮಾಡಬಹುದು. ತಾಳದಲ್ಲಿಯೂ ಮಾಡಬಹುದು. 'ಚಿತ್ತೈಕಾಗ್ರಂ ಅವಧಾನಂ'.. ಎಂದರೆ ಚಿತ್ತದಲ್ಲಿ ಏಕಾಗ್ರತೆ ಇದ್ದರೆ ಅದು ಅವಧಾನವಾಗುತ್ತದೆ. ಪಲ್ಲವಿ ಎಂಬುದು ಒಂದು ಕೀರ್ತನೆಯ ಮೊದಲ ಭಾಗ. ಕರ್ನಾಟಕ ಸಂಗೀತದಲ್ಲಿ ಪದ, ಲಯ ಹಾಗೂ ವಿನ್ಯಾಸಕ್ಕೆ ವಿಶೇಷ ಅರ್ಥವಿದೆ. ಇದು ಮನೋಧರ್ಮ ಸಂಗೀತ ಪ್ರಕಾರಕ್ಕೆ ಸೇರಿದ್ದು. ಇದು ಕಲಾವಿದನ ಪಾಂಡಿತ್ಯ, ವಿದ್ವತ್ ಅನ್ನು ಅವಲಂಬಿಸಿರುತ್ತದೆ. ಪಲ್ಲವಿ ಹಾಡುವುದಕ್ಕೆ ಸೃಜನಶೀಲತೆ, ಕ್ರಿಯಾಶೀಲತೆ ಬಹಳ ಮುಖ್ಯವಾಗಿ ಬೇಕು' ಎಂದು ಹೇಳುತ್ತಾರೆ ವಿದ್ವಾನ್ ನಂದಕುಮಾರ್.

### ತಾಳವಧಾನದಲ್ಲಿ ವಿದ್ವಾನ್ ಚಂದ್ರಪ್ಪ

ಸಂಗೀತ ಪ್ರಕಾರದಲ್ಲಿ ಅದರಲ್ಲೂ 'ಪಲ್ಲವಿ'ಯಲ್ಲಿ ಲಯ ವಿನ್ಯಾಸ ಒಂದು ವಿಶೇಷ ತಾಂತ್ರಿಕ ಕಲೆ. ಇಲ್ಲಿ ತಾಳ ಜ್ಞಾನ ಅಥವಾ ತಾಳದ ಲೆಕ್ಕಾಚಾರ ಪ್ರಮುಖ ಪಾತ್ರ ವಹಿಸುತ್ತದೆ. ಕಾಂಚೀಪುರಂ ನಯನಾ ಪಿಳ್ಳೆ, ತಿರುಪತಿ ನರಸಿಂಹಲು ನಾಯ್ಡು ಈ 'ಪಲ್ಲವಿ' ಕಲೆಯಲ್ಲಿ ವಿದ್ವಾಂಸರಾಗಿದ್ದವರು. ಇವರ ಗರಡಿಯಲ್ಲಿ ಪಳಗಿದವರು ವಿದ್ವಾನ್ ಎಸ್. ಚಂದ್ರಪ್ಪ ಅವರು. ಪಲ್ಲವಿಯಲ್ಲಿ ಮಹತ್ತರ ಸಾಧನೆ ಮಾಡಿ ಸಿದ್ಧಿಸಿಕೊಂಡು ಮಹಾನ್ ವಿದ್ವಾಂಸರಾದ ಇವರ ಹೆಸರಿನೊಂದಿಗೆ 'ಪಲ್ಲವಿ' ಅನ್ವರ್ಥವಾಗಿ ಬಂದು ಚಂದ್ರಪ್ಪ 'ಪಲ್ಲವಿ ಚಂದ್ರಪ್ಪ' ಎಂದೇ ಸಂಗೀತ ಲೋಕದಲ್ಲಿ ಚಿರಪರಿಚಿತರಾದರು. ಪ್ರಾಚೀನ ಕಾಲದ ಅಪರೂಪ ಹಾಗೂ ಕ್ಲಿಷ್ಟಕರ ತಾಳಗಳಾದ ನಂದಿಕೇಶ್ವರ ಮತಕ್ಕೆ ಸೇರಿದ 108 ಅಷ್ಟೋತ್ತರ ತಾಳಗಳು, ಶುಕ್ರಾಚಾರ್ಯರ ಮತಕ್ಕೆ ಸೇರಿದ 35 ದಿವ್ಯ ಸಂಕೀರ್ಣ ತಾಳಗಳು, ಅಗಸ್ತ್ಯರ ಮತಕ್ಕೆ ಸೇರಿದ 52 ಅಪರೂಪದ ತಾಳಗಳು, ಹನುಮ ಬರ್ತರ ಮತಕ್ಕೆ ಸೇರಿದ ಮರ್ಮ ತಾಳಗಳನ್ನು ಬೆಳಕಿಗೆ ತಂದವರೇ ಚಂದ್ರಪ್ಪ ಅವರು. ಇವೆಲ್ಲವನ್ನೂ ಮದರಾಸು ಸಂಗೀತ ಅಕಾಡೆಮಿ, ಗಾನಕಲಾ ಪರಿಷತ್ ಸಮ್ಮೇಳನಗಳಲ್ಲಿ ಹಾಡಿ, ತಾಳವಧಾನ ಪ್ರಾತ್ಯಕ್ಷಿಕೆ ನಡೆಸಿಕೊಟ್ಟು ಸಂಗೀತ ಕ್ಷೇತ್ರವನ್ನು ಮತ್ತಷ್ಟು ಶ್ರೀಮಂತಗೊಳಿಸಿದ್ದಾರೆ.

1916, ಮೇ 11ರಂದು ನೆಲಮಂಗಲದಲ್ಲಿ ಬಿ.ಶೇಷಪ್ಪ ಹಾಗೂ ಮುನಿಯಮ್ಮ ದಂಪತಿಯ ಮಗನಾಗಿ ಜನಿಸಿದ ಪಲ್ಲವಿ ಚಂದ್ರಪ್ಪ ಅವರದು ಸಂಗೀತದಲ್ಲಿ ಬಹುಮುಖ ಪ್ರತಿಭೆ. ಒಳ್ಳೆಯ ಸಂಗೀತಗಾರರಾಗಿದ್ದವರು ಮಾತ್ರವಲ್ಲದೆ ಬಳಕೆಯಲ್ಲಿಲ್ಲದ ಅಪರೂಪದ ರಾಗಗಳಲ್ಲಿ ಹರಿದಾಸರ, ಶಿವಶರಣರ ದೇವರನಾಮ ಹಾಗೂ ವಚನಗಳಿಗೆ ಸ್ವರ ಸಂಯೋಜನೆ ಮಾಡಿದ್ದಾರೆ. ಹಲವು ಕೀರ್ತನೆಗಳಿಗೆ, ಕೃತಿಗಳಿಗೆ ಚಿಟ್ಟೆಸ್ವರಗಳನ್ನೂ ರಚಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಕರ್ನಾಟಕ ಸಂಗೀತದ ಆನಂದಭೈರವಿ, ಶಂಕರಾಭರಣ, ತೋಡಿ, ಸಿಂಹೇಂದ್ರ ಮಧ್ಯಮ ಮುಂತಾದ ರಾಗಗಳ ಪಲ್ಲವಿಗೆ ಸ್ವರ ಸಂಯೋಜನೆ ಮಾಡಿದ್ದಾರೆ. ಕಛೇರಿಗಳಲ್ಲಿ ಅಪರೂಪವಾಗಿ ಹಾಡುವ ಮಾರರಂಜಿನಿ, ವಷಡ್ವಧಮಾರ್ಗಿಣಿ ರಾಗಗಳ ಕೃತಿಗಳಿಗೆ ಮಟ್ಟುಗಳನ್ನು ಅಳವಡಿಸಿದ್ದಾರೆ. ಪುರಂದರ ದಾಸರ ರಚನೆಯನ್ನು ರಾಗಮಾಲಿಕೆಯನ್ನಾಗಿ ಮಾಡಿ ವಿಲಾಸಿನಿ ರಾಗ ಆದಿತಾಳದಲ್ಲಿ ಸ್ವರಸಂಯೋಜನೆ ಮಾಡಿರುವುದು ಇವರು ಸಂಗೀತಕ್ಕೆ ನೀಡಿದ ಅಮೋಘ ಕಾಣಿಕೆ. ಪಲ್ಲವಿ ಚಂದ್ರಪ್ಪ ಅವರ ಸಾಧನೆ ಮನ್ನಿಸಿ ಅವರಿಗೆ ವಿವಿಧ ಸಂಘ ಸಂಸ್ಥೆಗಳಿಂದ 'ಅವಧಾನ ಪಲ್ಲವಿ ವಿಶ್ಲೇಷಣ ತಿಲಕ', 'ಗಾನ ಕಲಾಭೂಷಣ' 'ತಾಳ ನಿರ್ಣಯ ಸಿಂಧು', ಸಂಗೀತ ನೃತ್ಯ ಅಕಾಡೆಮಿಯಿಂದ 'ಕರ್ನಾಟಕ ಕಲಾ ತಿಲಕ', 'ಲಯಯೋಗಿ' 'ಪಲ್ಲವಿ ಪ್ರವೀಣ' ಇತ್ಯಾದಿ ಬಿರುದುಗಳು ಬಂದಿವೆ.

ಬೆಂಗಳೂರಿನ ಪಲ್ಲವಿ ಗಾನಸಭಾ, ಭಾರತೀಯ ವಿದ್ಯಾಭವನದ ಸಹಕಾರದೊಂದಿಗೆ ಈಚೆಗೆ 'ಪಲ್ಲವಿ ಸಂಗೀತೋತ್ಸವ' ನಡೆಸಿ ಕೇಳುಗರಿಗೆ ಸಂಗೀತ ಕಛೇರಿ ಜತೆಗೆ 'ಅವಧಾನ ಪಲ್ಲವಿ' ಪ್ರಾತ್ಯಕ್ಷಿಕೆಯನ್ನೂ ಸವಿಯುವ ಸುಯೋಗ ಒದಗಿಸಿತ್ತು. ■


ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ



ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು

ಶ್ರೀ ಚಂದ್ರಶೇಖರ್

ಕೇರಳ ಹಾಗೂ ಕೊಳ್ಳೆಗಾಲದ ಮಾಂತ್ರಿಕರು

99722 95444

ಭಾನಾಮತಿ ಸಿದ್ಧಿಸಾಧಕರು ಬೆಂಗಳೂರು ಮತ್ತು ಚೆನ್ನೈನಲ್ಲಿ ಅಪಾರ ಜನಮನ್ನಣೆ ಪಡೆದಿರುವ ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು ಶ್ರೀ ಚಂದ್ರಶೇಖರ್‌ರವರು ಸಿಗಂಧೂರು ಚೌಡೇಶ್ವರಿ ದೇವಿಯ ಉಪಾಸಕರು ನಿಮ್ಮೆಲ್ಲ ಸಮಸ್ಯೆಗಳಿಗೆ ಶೀಘ್ರ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ವಶೀಕರಣ ಸ್ಪೆಷಲಿಸ್ಟ್

ಸ್ತ್ರೀ ವಶೀಕರಣ, ಪುರುಷ ವಶೀಕರಣ, ಲೈಂಗಿಕ ವಶೀಕರಣ, ಇಷ್ಟಪಟ್ಟವರು ನಿಮ್ಮಂತಾಗಲು, ಲಕ್ಷ್ಮೀ ವಶೀಕರಣ, ಸ್ತ್ರೀ ಪುರುಷರ ಗುಪ್ತ ಸಮಸ್ಯೆಗಳಿಗೆ ಕೇವಲ 2 ದಿನಗಳಲ್ಲಿ ಪರಿಹಾರ ಶತಸಿದ್ಧ.

ಸ್ತ್ರೀಯರಿಗೆ ವಿಶೇಷ ಪರಿಹಾರ

ಮದುವೆ ವಿಳಂಬ, ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರಿಂದ ಅನುಕೂಲ ಮಾಡಿಕೊಳ್ಳಲು, ಗಂಡ ಹೆಂಡತಿ ಕಲಹ, ವ್ಯಾಪಾರಾಭಿವೃದ್ಧಿ, ಸಾಲಗಾರರ ಕಿರಿಕಿರಿ, ಸಂತಾನ ಸಮಸ್ಯೆ, ಆರೋಗ್ಯ, ಲೈಂಗಿಕ ಸಮಸ್ಯೆ, ಕುಟುಂಬ ಕಲಹ, ಮಾಟಮಂತ್ರ ನಿವಾರಣೆ, ಸ್ತ್ರೀಯರ personal problems, ಇಷ್ಟಪಟ್ಟವರು ನಿಮ್ಮಂತಾಗಲು, ಹಣಕಾಸು, ಮಕ್ಕಳು ಪ್ರೀತಿ ಪ್ರೇಮದಲ್ಲಿ ಬಿದ್ದು ತಂದೆ ತಾಯಿಗಳ ಮಾತು ಕೇಳದಿದ್ದಲ್ಲಿ

ಸ್ತ್ರೀ ಪುರುಷರ ಕಠಿಣ ಗುಪ್ತ ಹತ್ತು ಹಲವು ಸಮಸ್ಯೆಗಳಿಗೆ 2 ದಿನಗಳಲ್ಲಿ 200% ಗ್ಯಾರಂಟಿ ಪರಿಹಾರ

ಖಾಯಂ ವಿಳಾಸ:
ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ,
ತಾಂತ್ರಿಕರು ಶ್ರೀ ಚಂದ್ರಶೇಖರ್
U.N ಆರ್ಕೇಡ್, ಇಂದ್ರಪ್ರಸ್ಥ ಹೋಟೆಲ್ ಹತ್ತಿರ,
ವಿಜಯನಗರ ಮುಖ್ಯ ಬಸ್ ನಿಲ್ದಾಣದ ಹಿಂಭಾಗ,
ವಿಜಯನಗರ, ಬೆಂಗಳೂರು